Q-330-(102)
21/12/21

# ಕರ್ನಾಟಕ ವಿಧಾನ ಪರಿಷತ್ತು

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸಿ.ಎಂ. ಲಿಂಗಪ್ಪ, ಇವರು "ರಾಮನಗರ ತಾಲ್ಲೂಕಿನಲ್ಲಿ ಭೂ ಮಂಜೂರಾತಿ ಸಮಿತಿ ರಚನೆಗೊಂಡಾಗಿನಿಂದಲೂ ಒಂದು ಬಾರಿಯು ಸಭೆ ಸೇರದೆ ಇರುವುದರಿಂದ 2004ನೇ ಸಾಲಿನಿಂದಲೂ ಅರ್ಜಿಗಳು ವಿಲೇವಾರಿಯಾಗದೇ ಬಾಕಿ ಉಳಿದಿರುವುದಲ್ಲದೇ ಭೂ ಮಂಜೂರಾತಿ ಸಮಿತಿಯಿಂದ ಮಂಜೂರಾಗಿರುವ ಗೋಮಾಳ ಭೂಮಿಗಳಿಗೆ ಸಾಗುವಳಿ ಪತ್ರ ಸಹ ನೀಡದಿರುವುದರಿಂದ ಅರ್ಜಿದಾರರಿಗೆ ತೀವ್ರ ತೊಂದರೆಯಾಗುತ್ತಿರುವ ಕುರಿತು" ನಿಯಮ 330 ರಡಿ ಪ್ರಸ್ತಾಪಿಸಿರುವ ಸೂಚನೆಗೆ ಮಾನ್ಯ ಕಂದಾಯ ಸಚಿವರ ಹೇಳಿಕೆ:

* * * *

ರಾಮನಗರ ತಾಲ್ಲೂಕಿನ ಬಗರ್ ಹುಕ್ಕುಂ ಸಾಗುವಳಿ ಸಕ್ರಮೀಕರಣ ಸಮಿತಿಯು 2004 ರಿಂದ ಈ ಕೆಳಕಂಡ ದಿನಾಂಕಗಳಂದು ಸಭೆ ಸೇರಿ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿರುತ್ತದೆ.

| ಕ್ರ.ಸಂ | ಸಭೆ ಸೇರಿದ ದಿನಾಂಕ | ಕ್ರ.ಸಂ | ಸಭೆ ಸೇರಿದ ದಿನಾಂಕ |
|---|---|---|---|
| 1 | 12.01.2004 | 20 | 21.11.2016 |
| 2 | 30.01.2004 | 21 | 02.03.2017 |
| 3 | 03.02.2004 | 22 | 31.10.2017 |
| 4 | 06.02.2004 | 23 | 10.07.2017 |
| 5 | 10.02.2004 | 24 | 31.10.2017 |
| 6 | 21.02.2004 | 25 | 10.11.2017 |
| 7 | 02.03.2007 | 26 | 24.11.2017 |
| 8 | 24.07.2007 | 27 | 31.01.2018 |
| 9 | 18.08.2010 | 28 | 19.02.2018 |
| 10 | 25.08.2010 | 29 | 01.03.2018 |
| 11 | 15.09.2010 | 30 | 07.03.2018 |
| 12 | 10.11.2010 | 31 | 15.03.2018 |
| 13 | 25.05.2011 | 32 | 21.03.2018 |
| 14 | 13.07.2011 | 33 | 25.02.2021 |
| 15 | 03.12.2012 | | |
| 16 | 28.07.2016 | | |
| 17 | 24.09.2016 | | |
| 18 | 22.10.2016 | | |
| 19 | 05.11.2016 | | |

ಮೇಲ್ಕಂಡ ದಿನಾಂಕಗಳಂದು ಸಮಿತಿಯು ಒಟ್ಟಾರೆ 33 ಸಭೆಗಳನ್ನು ನಡೆಸಿ 254 ಅರ್ಹ ಫಲಾನುಭವಿಗಳಿಗೆ ಸಾಗುವಳಿ ಚೀಟಿ ನೀಡಲಾಗಿರುತ್ತದೆ.

ನಿಗಧಿತ ಅವಧಿಯಲ್ಲಿ ನಮೂನೆ-50 ಮತ್ತು ನಮೂನೆ-53 ರಲ್ಲಿ ಸ್ವೀಕರಿಸಲಾದ ಎಲ್ಲಾ ಅರ್ಜಿಗಳು ವಿಲೇವಾರಿಯಾಗಿರುತ್ತವೆ.

ರಾಮನಗರ ವಿಧಾನ ಸಭಾ ಕ್ಷೇತ್ರದ ನೂತನ ಬಗರ್ ಹುಕ್ಕುಂ ಸಾಗುವಳಿ ಸಕ್ರಮೀಕರಣ ಸಮಿತಿಯು ದಿನಾಂಕ:03.11.2020 ರಲ್ಲಿ ರಚನೆಯಾಗಿದ್ದು, ದಿನಾಂಕ:25.02.2021 ರಂದು ಒಂದು ಬಾರಿ ಸಭೆ ನಡೆಸಲಾಗಿರುತ್ತದೆ.

ರಾಮನಗರ ತಾಲ್ಲೂಕಿನಲ್ಲಿ ನಮೂನೆ-50, ನಮೂನೆ-53 ಮತ್ತು ನಮೂನೆ-57 ರಲ್ಲಿ ಸ್ವೀಕೃತವಾಗಿರುವ ಅರ್ಜಿಗಳ ವಿವರ ಈ ಕೆಳಕಂಡಂತಿರುತ್ತದೆ.

| ನಮೂನೆ | ಸ್ವೀಕೃತವಾದ ಅರ್ಜಿಗಳ ಸಂಖ್ಯೆ | ಮಂಜೂರಾದ ಅರ್ಜಿಗಳ ಸಂಖ್ಯೆ | ತಿರಸ್ಕೃತ ಅರ್ಜಿಗಳ ಸಂಖ್ಯೆ | ಬಾಕಿ ಇರುವ ಅರ್ಜಿಗಳ ಸಂಖ್ಯೆ |
|---|---|---|---|---|
| ನಮೂನೆ 50 | 5566 | 2806 | 2760 | 0 |
| ನಮೂನೆ 53 | 7171 | 2040 | 5131 | 0 |
| ನಮೂನೆ 57 | 4555 | 0 | 0 | 4555 |

2004 ರಿಂದ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯಲ್ಲಿ ನಮೂನೆ 53 ರ ಅರ್ಜಿಗಳ ಪೈಕಿ ಮಂಜೂರಾದ 1413 ಫಲಾನುಭವಿಗಳ ಪೈಕಿ 254 ಫಲಾನುಭವಿಗಳಿಗೆ ಸಾಗುವಳಿ ಚೀಟಿ ನೀಡಲಾಗಿರುತ್ತದೆ.

**ಆರ್‌ಡಿ 270 ಎಲ್‌ಜಿಕ್ಯೂ 2021**

**(ಆರ್. ಅಶೋಕ)**

ಕಂದಾಯ ಇಲಾಖೆ.